ಓ.ಎಸ್.76/2016 ಪಿ.ಡಬ್ಲ್ಯೂ-3
ದೊಡ್ಡಪ್ಪ ತಂದೆ ಬಾಲಪ್ಪ

ದಿ.21-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎನ್ ವಕೀಲರಿಂದ:-**

ಕಾಳಪ್ಪನ ತಂದೆಯ ಹೆಸರು ಯಮನಪ್ಪ. ಕಾಳಪ್ಪ ಮತ್ತು ಗಂಗಪ್ಪ ಯಾವಾಗ ಭಾಗ ಆದರೂ ಎಂದರೆ ಅವರು 67 ವರ್ಷಗಳ ಹಿಂದೆ ಭಾಗ ಆಗಿರುತ್ತಾರೆ. ಈ ಹಿಂದೆ ದಾವಾ ಜಮೀನಿನ ಕಾಸರ ಪಹಣಿಯಲ್ಲಿ ಸ.ನಂ: 165 ಇತ್ತು. ಆಗ 29 ಎಕರೆ 18 ಗುಂಟೆ ಗಂಗಪ್ಪನ ಹೆಸರಿನಲ್ಲಿತ್ತು. ಗಂಗಪ್ಪನು ಬನ್ನೆಪ್ಪನಿಗೆ ಯಾವ ವರ್ಷದಲ್ಲಿ ಮಾರಾಟ ಮಾಡಿದ್ದಾರೆ ಎಂದರೆ 1347 ಫಸಲಿ ಈಗ  ವರ್ಷದ ಹಿಂದೆ ಆಗಿದೆ ಎಂದು ನುಡಿದಿರುತ್ತಾರೆ. ಸದರಿ ರಜಿಸ್ಟರ ದಾಖಲೆಯನ್ನು ತೆಗೆಸಿದಾಗ ನನಗೆ ಗೊತ್ತಾಗಿರುತ್ತದೆ. ಬನ್ನೆಪ್ಪನು 11 ಎಕರೆ 5 ಗುಂಟೆ ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಕೇವಲ 3 ಎಕರೆ ಮಾತ್ರ ಖರೀದಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ 1963-64 ನೇ ಸರ್ಕಾರದವರು ಹಿಸ್ಸಾ ಸರ್ವೆ ನಂಬರ ಮಾಡಿ ಕಬ್ಜಾ ವಹಿವಾಟು ಪ್ರಕಾರ  ಎಕರೆ ಮತ್ತು ಗುಂಟೆ ಮತ್ತು ಸರ್ವೆ ನಂಬರನ್ನು ನಮೂದು ಮಾಡಿದ್ದರು ಎಂದರೆ ಸರಿ. ಅದೇ ರೀತಿ ಸರ್ವೆ ಸಾಮಾನ್ಯವಾಗಿ ಸರ್ವೆ ನಂ:165 ಜಮೀನನ್ನು 29 ಎಕರೆ 18 ಗುಂಟೆ ಕಬ್ಜಾ ವಹಿವಾಟು  ಪ್ರಕಾರ ಹಿಸ್ಸಾ ಮಾಡಿರುತ್ತಾರೆ ಎಂದರೆ ಸರಿ. ಆಗ ಸ.ನಂ: 165/1 ಎ ಮತ್ತು 165/1 ಬಿ ಎಂದು ಮತ್ತು ಹಿಸ್ಸಾ 2 ಎ ಎಂದು ಮೂರು ಹಿಸ್ಸಾ ಮಾಡಿರುತ್ತಾರೆ  ಎಂದರೆ ಸರಿ. ಸ.ನಂ: 165/2 ಎ 11 ಎಕರೆ 5 ಗುಂಟೆ ಮಾಡಿದ್ದರು ಎಂದರೆ ಸರಿಯಲ್ಲ. ಸ.ನಂ:165/1 ಎ. 9 ಎಕರೆ 6 ಗುಂಟೆ ಮಾಡಿದ್ದರು ಎಂದರೆ ಸರಿಯಲ್ಲ.

ಮುಂದುವರೆದು ಪಾಟಿ ಸವಾಲಿಗೆ ಸಮಯ ಕೋರಿದ್ದು. ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.